# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶನಿವಾರ, ೧೮, ಸೆಪ್ಟೆಂಬರ್, ೨೦೨೧ (ಭಾದ್ರಪದ, ೨೭, ಶಕವರ್ಷ, ೧೯೪೩)<br>BENGALURU, SATURDAY, 18, SEPTEMBER, 2021 (BHADRAPADA , 27, SHAKAVARSHA, 1943) | ನಂ. ೭೮೧<br>No. 781 |
|---|---|---|


**KARNATAKA LEGISLATIVE ASSEMBLY**

**FIFTEENTH LEGISLATIVE ASSEMBLY**

**TENTH SESSION**

## THE KARNATAKA POLICE (AMENDMENT) BILL, 2021
## (LA Bill No. 37 of 2021)

A Bill further to amend the Karnataka Police Act, 1963.

Whereas it is expedient further to amend the Karnataka Police Act, 1963 (Karnataka Act 4 of 1964), for the purpose hereinafter appearing:

Be it enacted by the Karnataka State Legislature in the Seventy second year of the Republic of India as follows:-

**1. Short title and commencement.-**(1) This Act may be called the Karnataka Police (Amendment) Act, 2021.

(2) It shall come into force at once.

**2. Amendment of Section 2.-**In section 2 of the Karnataka Police Act, 1963 (Karnataka Act 04 of 1964) (here in after referred to as the Principal Act) in clause (3),-

(a) after the words “Profit or gain” occurring in two places the words “or otherwise” shall be inserted.

(b) in clause (7),

(i) for the words "gaming" does not include a lottery but includes all forms of wagering or betting in connection with any game of chance

except wagering or betting on a horse-race run on any race course within or outside the State, when such wagering or betting takes place" the words "gaming means and includes online games, involving all forms of wagering or betting, including in the form of tokens valued in terms of money paid before or after issue of it, or electronic means and virtual currency, electronic transfer of funds in connection with any game of chance, but does not include a lottery or wagering or betting on horse-race run on any race course within or outside the State, when such wagering or betting takes place" shall be substituted.

(ii) in the explanation in item (i) the following shall be inserted at the end, namely:-

"any act or risking money, or otherwise on the unknown result of an event including on a game of skill and any action specified above carried out directly or indirectly by the players playing any game or by any third parties".

(c) for clause (11) the following shall be substituted, namely:-

"(11) 'Instruments of gaming' includes any article used or intended to be used as a subject or means of gaming, including computers, computer system, mobile app or internet or cyber space, virtual platform, computer network, computer resource, any communication device, electronic applications, software and accessory or means of online gaming, any document, register or record or evidence of any gaming in electronic or digital form, the proceeds of any online gaming as or any winning or prizes in money or otherwise distributed or intended to be distrubted inrespect of any gaming;

**Explanation:** The words 'computer', 'communication device', 'computer network', 'computer resource', 'computer system', 'cyber café' and 'electronic record' used in this Act shall have the respective meaning assigned to them in the Information Technology Act, 2000 (Central Act 21 of 2000)".

(d) after clause (12) the following shall be inserted, namely:-

"(12A) "Online gaming" means and includes games as defined in clause (7) played online by means of instruments of gaming,

computer, computer resource, computer net work, computer system or by mobile app or internet or any communication device, electronic application, software or on any virtual platform;"

(e) In clause (13), the following shall be inserted at the end, namely:-

"including a recreation club or on virtual platform, mobile app or internet or any communication device, electronic application, software, online gaming and computer resource as defined in Information Technology Act, 2000(Central Act 21 of 2000) or under this Act;"

**3. Amendment of Section 78.-**In section 78 of the Principal Act, In sub-section (1) in clause (a),-

(a) after the words "enclosure, vehicle, vessel or place" the words and figures "or at cyber café or online gaming involving wagering or betting including computer resource or mobile application or internet or any communication device as defined in the Information Technology Act, 2000 (Central Act 21 of 2000)" shall be inserted.

(i) in clause (vi) after the words "depend on chance or" the words "skill of other" shall be inserted.

(ii) after the clause (vi) the following shall be inserted, namely:-

"(vii)on any act on risking money or otherwise on the unknown result of an event including on a game of skill"; or

(iii) in the hanging para for the words "one year" the words "three years" and for the words "one thousand" the words "one lakh" shall be substituted.

(iv) in the proviso for the words “one month” the words “six months” and for the words “five hundred” the words “ten thousand” shall respectively be substituted;

(b) In sub-section (2),-

(i) after the words "sub section or present" the words "or aids or abets" shall be inserted;

(ii) for the words "one month" the words "six months" and for the words "five hundred" the words "ten thousand" shall be respectively substituted;

(c) In sub-section (3), for the words "three months" the words "one year" and for the words "three hundred" the words "twenty thousand" shall be respectively substituted.

**4. Amendment of Section 79.-** In section 79 of the Principal Act,-

(i) in the hanging para, for the words "one year" the words "three years" shall be substituted and after the word "fine" the words "up to rupees one lakh" shall be inserted;

(ii) in the proviso,-

(a) in clause (a) for the words "three months" the words "six months" and for the words "five hundred" the words "ten thousand" shall be respectively substituted;

(b) in clause (b) for the words "six months" the words "one year" and for the words "five hundred" the words "fifteen thousand" shall be respectively substituted; and

(c) in clause (c) for the words "nine months" the words "eighteen months" and for the words "one thousand" the words "twenty thousand" shall be respectively substituted.

**5. Amendment of Section 80.-**In section 80 of the Principal Act,-

(i) for the words "one year" the words "three years" shall be substituted and after the word "fine" the words "upto rupees one lakh" shall be inserted;

(ii) in the proviso,-

(a) in clause (a) for the words "one month" the words "six months" and for the words "two hundred" the words "ten thousand" shall be respectively substituted;

(b) in clause (b) for the words "three months" the words "one year" and for the words "two hundred" the words "fifteen thousand" shall be respectively substituted; and

(c) in clause (c) for the words "six months" the words "eighteen months" and for the words "five hundred" the words "twenty thousand" shall be respectively substituted.

**6. Amendment of Section 87.-**In section 87 of the Principal Act,-

(a) after the words "suspected to be gaming" the words "or aiding or abetting such gaming" shall be inserted;

(b) for the words "three months" the words "six months" and for the words "three hundred" the words "Ten thousand" shall be respectively substituted.

**7. Amendment of Section 114.-** In section 114 of the Principal Act, after the words “fine” the words “which shall not be less than twenty five thousand but which may extend to rupees one lakh” shall be inserted.

**8. Insertion of section 128A.-**After section 128 the Principal Act the following shall be inserted, namely:-

“**128A.Certain offences to be Cognizable, Non-bailable,-**

(1) All offences under chapter VII except section 87; and all offences under section 90, 108, 113, 114 and 123 under chapter VIII shall be cognizable and non-bailable;

(2) Offences under section 87 shall be cognizable and bailable .”

**9. Amendment of section 176.-**In section 176 of the Principal Act, the words “and to wagering by persons taking part in such game of skill” shall be omitted.

**STATEMENT OF OBJECTS AND REASONS**

It is consider necessary further to amend the Karnataka Police Act, 1963 (Karnataka Act 4 of 1964) to provide for,-

(i) effective enforcement of the provisions of this Act by making offences under Chapter VII and under section 90, 98, 108, 113,114 and 123 as cognizable offence and non-bailable except section 87 which is made cognizable and bailable;

(ii) include the use of cyberspace including computer resources or any communication devise as defined in Information Technology Act, 2000 in the

process of gaming. to curb the menace of gaming through internet, mobile app;

(iii) enhance the punishment for Gaming for the orderly conduct of citizens and to wean them away from the vice of gambling;

(iv) certain other consequential amendments are also made.

Hence the Bill,

**FINANCIAL MEMORANDUM**

There is no extra expenditure involved the proposed legislative measure.

**AARAGA JNANENDRA**
Minister for Home

**M.K. VISHALAKSHI**
Secretary (I/c)
Karnataka Legislative Assembly

**ANNEXURE**

## Extract from the Karnataka Police Act, 1963

## (Karnataka Act 4 of 1964)

**XX XX XX**

**2. Definitions.—** In this Act, unless the context otherwise requires,—

**XX XX XX**

(3) "common gaming-house" means a building, room, tent, enclosure, vehicle, vessel or place in which any instruments of gaming are kept or used for the profit or gain of the person owning, occupying, or keeping such building, room, tent, enclosure, vehicle, vessel or place, or of the person using such building, room, tent, enclosure, vehicle, vessel or place, whether he has a right to use the same or not, such profit or gain being either by way of a charge for the use of the instruments of gaming or of the building, room, tent, enclosure, vehicle, vessel or place, or otherwise howsoever or as subscription or other payment for the use of facilities along with the use of the instruments of gaming or of the building, room, tent, enclosure, vehicle, vessel or place for purposes of gaming;

**Explanation.—** In this clause "person" includes a company, association, club or other body of persons whether incorporated or not.

**XX XX XX**

(7) "gaming" does not include a lottery but includes all forms of wagering or betting in connection with any game of chance, except wagering or betting on a horse-race run on any race course within or outside the State, when such wagering or betting takes place,—

(i) on the day on which such race is run; and

(ii) in an enclosure set apart for the purpose in a race course by the licensee of such race course under the terms of the licence issued under section 4 of the Mysore Race Courses Licensing Act, 1952 (Mysore Act VIII of 1952); and

(iii) between any person being present in such enclosure, on the one hand and such licensee or other person licensed by such licensee in terms of the aforesaid licence on the other in such manner and by such contrivance as may be permitted by such licence.

**Explanation.—**In this clause,—

(i) 'wagering or betting,' includes the collection or soliciting of bets, the receipt or distribution of winnings or prizes, in money or otherwise,

in respect of any act which is intended to aid or facilitate wagering or betting or such collection, soliciting, receipt or distribution;

(ii) 'game of chance' includes a game of chance and skill combined and a pretended game of chance or of chance and skill combined, but does not include any athletic game or sport;

**XX XX XX**

(11) "instruments of gaming" includes any article used or intended to be used as a subject, or means of gaming, any document used or intended to be used as a register or record or evidence of any gaming, the proceeds of any gaming and any winnings or prizes in money or otherwise distributed or intended to be distributed in respect of any gaming;

**XX XX XX**

(13) "place" includes a building, a tent, a booth or other erection, whether permanent or temporary, or any area whether enclosed or open;

**XX XX XX**

(18) "public place" includes the foreshore, the precincts of every public building or monument, and all places accessible to the public for drawing water, washing or bathing or for the purpose of recreation;

**XX XX XX**

(20) "street" includes any highway, bridge, way over a causeway, viaduct, arch, quay or wharf or any road, lane, footway, square, court, alley or passage accessible to the public, whether a thoroughfare or not;

**XX XX XX**

(23) "vehicle" means any carriage, cart, van, dray, truck, hand-cart or other conveyance of any description and includes a bicycle, tricycle, a rickshaw, an automatic car, a vessel or an aeroplane.

**XX XX XX**

**78. Opening, etc., of certain forms of gaming.—** (1) Whoever,—

(a) being the owner or occupier or having the use of any building, room, tent, enclosure, vehicle, vessel or place, opens, keeps or uses the same for the purpose of gaming,—

(i) on a horse-race, or

(ii) on the market price of cotton, bullion or other commodity or on the digits of the number used in stating such price, or

(iii) on the amount or variation in the market price of any such commodity or on the digits of the number used in stating the amount of such variation, or

(iv) on the market price of any stock or share or on the digits of the number used in stating such price, or

(v) on the number of registration or on the digits of the number of registration of any motor vehicle using a public place, or

(vi) on any transaction or scheme of wagering or betting in which the receipt or distribution of winnings or prizes in money or otherwise is made to depend on chance; or

(b) being the owner or occupier of any such building, room, tent, enclosure, vehicle, vessel or place knowingly or wilfully permits the same to be opened, occupied, kept or used by any other person for the purpose of gaming on any of the objects aforesaid, or

(c) has the care or management of, or in any manner assists in, conducting the business of, any such building, room, tent, enclosure, vehicle, vessel or place opened, occupied, kept or used for the purpose of gaming on any of the objects aforesaid, or

(d) advances or furnishes money for the purpose of gaming on any of the objects aforesaid with persons frequenting any such building, room, tent, enclosure, vehicle, vessel or place,

shall, on conviction, be punished with imprisonment which may extend to one year, or with fine which may extend to one thousand rupees, or with both:

Provided that, in the absence of special reasons to be recorded in writing, the punishment to be imposed on an offender on conviction for an offence under this sub-section shall be imprisonment for not less than one month or fine of not less than five hundred rupees or both.

(2) Whoever is found in any building, room, tent, enclosure, vehicle, vessel or place referred to in sub-section (1), gaming on any of the objects specified in that sub-section, or present, for the purpose of gaming on any such object shall, on conviction, be punished with imprisonment which may extend to one month or with fine which may extend to five hundred rupees or with both.

Any person found in any such building, room, tent, enclosure, vehicle, vessel or place during any gaming therein on any of the objects specified in sub-section (1) shall be presumed, until the contrary is proved, to have been there for the purpose of gaming on such object.

(3) Whoever is found gaming on any of the objects specified in sub-section (1) in any public street or thoroughfare or in any place to which the public have or are permitted to have access shall, on conviction be punished with imprisonment which may extend to three months or with fine which may extend to three hundred rupees, or with both.

**XX XX XX**

**79. Keeping common gaming house, etc.—** Any person who,—

(a) opens, keeps or uses any building, room, tent, enclosure, vehicle, vessel, or place for the purpose of a common gaming-house;

(b) being the owner or occupier of any such building, room, tent, enclosure, vehicle, vessel, or place knowingly or wilfully permits the same to be opened, occupied, kept or used by any other person for the purpose aforesaid;

(c) has the care or management of, or in any manner assists in conducting the business of, any such building, room, tent, enclosure, vehicle, vessel, or place opened, occupied, kept or used for the purpose aforesaid; or

(d) advances or furnishes money for the purpose of gaming with persons frequenting any such building, room, tent, enclosure, vehicle, vessel, or place,

shall, on conviction, be punished with imprisonment which may extend to one year and with fine:

Provided that,—

(a) for a first offence, such imprisonment shall not be less than three months and fine shall not be less than five hundred rupees;

(b) for a second offence, such imprisonment shall not be less than six months and fine shall not be less than five hundred rupees; and

(c) for a third or subsequent offence, such imprisonment shall not be less than nine months and fine shall not be less than one thousand rupees.

**XX** **XX** **XX**

**80. Gaming in common gaming-house, etc.—** Whoever is found in any common gaming-house gaming or present for the purpose of gaming shall, on conviction, be punished with imprisonment which may extend to one year and with fine:

Provided that,—

(a) for a first offence such imprisonment shall not be less than one month and fine shall not be less than two hundred rupees;

(b) for a second offence such imprisonment shall not be less three months and fine shall not be less than two hundred rupees; and

(c) for a third or subsequent offence such imprisonment shall not be less than six months and fine shall not be less than five hundred rupees.

**XX** **XX** **XX**

**87. Gaming in public streets.—** Whoever is found gaming or reasonably suspected to be gaming in any public street, or thoroughfare, or in any place to which the public have or permitted to have access or in any race-course shall, on conviction, be punished with imprisonment which may extend to three months or with fine which may extend to three hundred rupees, or with both and where such gaming consists of wagering or betting, any such person so found gaming shall, on conviction, be punishable in the manner and to the extent referred to in section 80 and all moneys found on such person shall be forfeited to the Government.

Any police officer may seize all things reasonably suspected to be instruments of gaming found in such public street, thoroughfare, place or race-course or on or about the person of those whom he shall so arrest, and the Magistrate may, on conviction of the offender, order such instruments to be forthwith destroyed. When anything has been found on or about any person and a court is satisfied that the police officer had reasonable grounds for suspecting that such thing was an instrument of gaming, such circumstance shall, until the contrary is proved, be evidence that such thing was an instrument of gaming and that the person on or about whom the thing was found was present for the purpose of gaming.

**XX** **XX** **XX**

**90. Printing, publishing or distributing any news or information**.—(1) No person shall print, publish, sell, distribute or in any manner circulate any newspaper, news-sheet or other document or any news or information with the intention of aiding or facilitating gaming.

(2) Any person who contravenes the provisions of sub-section (1) shall, on conviction, be punished with imprisonment which may extend to six months and with fine.

(3) Any Police Officer may enter and search any place for the purpose of seizing, and may seize all things reasonably suspected to be used or to be intended to be used, for the purpose of committing an offence under this section.

(4) Any Police Officer may arrest without warrant any person who contravenes the provisions of sub-section (1).

**XX XX XX**

**108. Penalty for contravention of rules or directions under section 35, 38 or 39,—** Whoever disobeys an order lawfully made under section 35, 38 or 39 or abets the disobedience thereof, shall, on conviction, be punished,—

(i) if the order disobeyed or of which the disobedience was abetted was made under subsection (1) of section 35, or under section 38 or section 39, with imprisonment for a term which may extend to one year but shall not, except for reasons to be recorded in writing, be less than four months and shall also be liable to fine;

(ii) if the said order was made under sub-section (2) of section 35, with imprisonment which may extend to one month or with fine which may extend to one hundred rupees; and

(iii) if the said order was made under sub-section (3) of section 35, with fine which may extend to one hundred rupees.

**XX XX XX**

**113. Penalty for contravention of directions under sections 54, 55, 56 or 63.—** Whoever opposes or disobeys or fails to conform to any direction issued under sections 54, 55, 56 or 63 or abets opposition to or disobedience of any such direction shall, on conviction, be punished with imprisonment which may extend to one year, but shall not, except for reasons to be recorded in writing, be less than four months, and shall also be liable to fine.

**XX XX XX**

**114. Penalty for entering area from which person has been directed to remove himself.—** Notwithstanding anything contained in section 61, any person who, in contravention of a direction issued to him under sections 54, 55, 56 or 63 enters the area from which he was directed to remove himself, shall on conviction, be punished with imprisonment for a term which may extend to two years, but shall not, except for reasons to be recorded in writing be less than six months, and shall also be liable to fine.

**XX XX XX**

**123. Penalty for causing disaffection, etc.—** (1) Whoever intentionally causes or attempts to cause, or does any act which he knows is likely to cause, disaffection towards the Government established by law in India, among the members of the police force, or induces or attempts to induce, or does any act which he knows is likely to induce, any member of the police force to withhold his services or to commit a breach of discipline shall be punished with imprisonment for a term which may extend to six months, or with fine which may extend to two hundred rupees, or with both.

**Explanation.—**Expressions of disapprobation of the measures of the Government with a view to obtain their alteration by lawful means, or of the disapprobation of the administrative or other action of the Government, do not constitute an offence under this section unless they cause or are made for the purpose of causing or likely to cause disaffection.

(2) Nothing shall be deemed to be an offence under this section which is done in good faith,—

(a) for the purpose of promoting the welfare or interests of any member of the police force by inducing him to withhold his services in any manner authorised by law; or

(b) by or on behalf of any association formed for the purpose of furthering the interests of members of the police force as such, where the association has been authorised or recognised by the Government and the act done is done under any rules or articles of the association which have been approved by the Government.

(3) No court shall take cognizance of any offence under this section except with the previous sanction, or on the complaint, of the District Magistrate.

(4) No court inferior to that of a magistrate of the first class shall try any offence under this section.

(5) Notwithstanding anything contained in Chapter XXII of the Code of Criminal Procedure, 1898, no offence under this section shall be triable summarily.

**XX XX XX**

**128. Prosecution for offences under other enactments not affected.—** Nothing in this Act shall be construed to prevent any person from being prosecuted and punished under any other enactment for any offence made punishable by this Act or from being prosecuted and punished under this Act for an offence punishable under any other enactment:

Provided that, all such cases shall be subject to the provisions of section 403 of the Code of Criminal Procedure, 1898.

**XX XX XX**

**176. Saving of games of skill.—** For the removal of doubts it is hereby declared that the provisions of sections 79 and 80 shall not be applicable to the playing of any pure game of skill and to wagering by persons taking part in such game of skill.

**XX XX XX**

**ಕರ್ನಾಟಕ ವಿಧಾನಸಭೆ**

**ಹದಿನೈದನೇ ವಿಧಾನಸಭೆ**

**ಹತ್ತನೇ ಅಧಿವೇಶನ**

# ಕರ್ನಾಟಕ ಪೊಲೀಸು ( ತಿದ್ದುಪಡಿ) ವಿಧೇಯಕ, 2021

**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ–37)**

ಕರ್ನಾಟಕ ಪೊಲೀಸು ಅಧಿನಿಯಮ, 1963ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೊಲೀಸು ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪೊಲೀಸು (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು;

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಪೊಲೀಸು ಅಧಿನಿಯಮ 1963ರ (1964ರ ಕರ್ನಾಟಕ ಅಧಿನಿಯಮ 04) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (3)ನೇ ಖಂಡದಲ್ಲಿ ,-

(ಎ) ಎರಡು ಕಡೆಗಳಲ್ಲಿ ಬರುವ “ಲಾಭ ಅಥವಾ ಸಂಪಾದನೆ” ಎಂಬ ಪದಗಳ ತರುವಾಯ “ಅಥವಾ ಅನ್ಯಥಾ” ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) 7ನೇ ಖಂಡದಲ್ಲಿ,-

(i) “ಜೂಜಾಟ” ಲಾಟರಿಯನ್ನು ಒಳಗೊಳ್ಳುವುದಿಲ್ಲ ಆದರೆ ರಾಜ್ಯದ ಒಳಗೆ ಅಥವಾ ಹೊರಗೆ ಯಾವುದೇ ರೇಸ್ ಕೋರ್ಸಿನಲ್ಲಿ ಕುದುರೆ ಓಟದ ಪಂದ್ಯದ ಮೇಲೆ ಬಾಜಿ ಕಟ್ಟುವಿಕೆ ಅಥವಾ ಪಣಕಟ್ಟುವಿಕೆಯನ್ನು ಹೊರತುಪಡಿಸಿ, ಅಂಥ ಬಾಜಿ ಕಟ್ಟುವಿಕೆ ಅಥವಾ ಪಣಕಟ್ಟುವಿಕೆಯು ನಡೆಯುವಾಗಿನ ಜೂಜಾಟದ ಯಾವುದೇ ಪಂದ್ಯದ ಸಂಬಂಧದಲ್ಲಿನ ಎಲ್ಲ ರೀತಿಯ ಬಾಜಿಕಟ್ಟುವಿಕೆ ಅಥವಾ ಪಣಕಟ್ಟುವಿಕೆಯನ್ನು ಒಳಗೊಳ್ಳುವುದು” ಎಂಬ ಪದಗಳ ಬದಲಾಗಿ

"ಜೂಜಾಟ" ಎಂದರೆ ಆನ್‌ಲೈನ್ ಆಟಗಳು ಹಾಗೂ ಟೋಕನ್ನುಗಳ ರೂಪದಲ್ಲಿದ್ದು, ಇದನ್ನು ನೀಡಿದ ಮೊದಲು ಅಥವಾ ತರುವಾಯ ಹಣ ಪಾವತಿಸುವ ನಿಬಂಧನೆಗಳಲ್ಲಿ ಮೌಲ್ಯ ಹೊಂದಿರುವುದನ್ನು ಒಳಗೊಂಡು ವಿದ್ಯುನ್ಮಾನ ವಿಧಗಳು ಮತ್ತು ವರ್ಚುವಲ್ ಕರೆನ್ಸಿ, ನಿಧಿಗಳ ವಿದ್ಯುನ್ಮಾನ ವರ್ಗಾವಣೆ, ಎಲ್ಲಾ ರೀತಿಯ ಬಾಜಿ ಕಟ್ಟುವಿಕೆ ಅಥವಾ ಪಣಕಟ್ಟುವಿಕೆಯನ್ನು ಒಳಗೊಳ್ಳುವುದು, ಆದರೆ ಲಾಟರಿಯನ್ನು ಅಥವಾ ರಾಜ್ಯದ ಒಳಗೆ ಅಥವಾ ಹೊರಗೆ ರೇಸ್ ಕೋರ್ಸಿನಲ್ಲಿ ಕುದುರೆ ಓಟದ ಪಂದ್ಯದ ಮೇಲೆ ಅಂಥ ಬಾಜಿಕಟ್ಟುವಿಕೆ ಅಥವಾ ಪಣಕಟ್ಟುವಿಕೆಯು ನಡೆಯುವಾಗಿನ ಪಂದ್ಯಕಟ್ಟುವಿಕೆ ಅಥವಾ ಪಣಕಟ್ಟುವಿಕೆಯನ್ನು ಒಳಗೊಳ್ಳುವುದಿಲ್ಲ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ವಿವರಣೆಯ ಬಾಬು (i) ರಲ್ಲಿ "ಅಥವಾ ಹಂಚಿಕೆ" ಎಂಬ ಪದಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಯಾವುದೇ ಹಣಹಾನಿ ಸಂಭವ ಅಥವಾ ಯಾವುದೇ ಕಾರ್ಯ ಅಥವಾ ಅನ್ಯಥಾ ಕೌಶಲ್ಯದ ಪಂದ್ಯವನ್ನೊಳಗೊಂಡ ಫಲಿತಾಂಶ ಗೊತ್ತಿಲ್ಲದ ಪ್ರಸಂಗ ಹಾಗೂ ಯಾವುದೇ ಪಂದ್ಯವನ್ನಾಡುವ ಆಟಗಾರರು ಅಥವಾ ಯಾರೇ ಮೂರನೇ ಪಕ್ಷಕಾರರು ಪ್ರತ್ಯೇಕವಾಗಿ ಅಥವಾ ಪರೋಕ್ಷವಾಗಿ ಕೈಗೊಳ್ಳುವ, ಮೇಲೆ ನಿರ್ದಿಷ್ಟಪಡಿಸಿದ ಯಾವುದೇ ಕಾರ್ಯ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಸಿ) (11)ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(11) 'ಜೂಜಾಡುವಿಕೆಯ ಉಪಕರಣಗಳು' ಎಂಬ ಪದವು ಗಣಕ ಯಂತ್ರಗಳು, ಗಣಕ ಯಂತ್ರ ಜೋಡಣೆ(ಸಿಸ್ಟಂ), ಮೊಬೈಲ್ ಆಪ್ ಅಥವಾ ಅಂತರ್ಜಾಲ ಅಥವಾ ಸೈಬರ್ ತಾಣ, ವರ್ಚುವಲ್ ವೇದಿಕೆ, ಗಣಕ ಯಂತ್ರ ಜಾಲ, ಗಣಕಯಂತ್ರ ಸಂಪನ್ಮೂಲ, ಯಾವುದೇ ಸಂವಹನ ಸಾಧನ, ವಿದ್ಯುನ್ಮಾನ ಅನ್ವಯಿಕಗಳು, ತಂತ್ರಾಂಶಗಳನ್ನೊಳಗೊಂಡಂತೆ ಜೂಜಾಡುವಿಕೆಯ ವಸ್ತುವಾಗಿ ಅಥವಾ ಸಾಧನಗಳಾಗಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಯಾವುದೇ ವಸ್ತು ಮತ್ತು ಯಾವುದೇ ಜೂಜಾಡುವಿಕೆಯ ಉಪಸಾಧನಗಳು ಅಥವಾ ಸಾಧನಗಳು, ವಿದ್ಯುನ್ಮಾನ ಅಥವಾ ಡಿಜಿಟಲ್ ರೂಪದಲ್ಲಿರುವ ಯಾವುದೇ ಜೂಜಾಡುವಿಕೆಯ ಯಾವುದೇ ದಸ್ತಾವೇಜು, ರಿಜಿಸ್ಟರ್ ಅಥವಾ ಅಭಿಲೇಖ ಅಥವಾ ಸಾಕ್ಷ್ಯ ಅಥವಾ ಹಂಚಲು ಉದ್ದೇಶಿಸಲಾದ ಯಾವುದೇ ಲಾಭಗಳು ಅಥವಾ ಹಣದ ರೂಪದ ಅಥವಾ ಹಣ ಅಥವಾ ಬೇರೆ ರೂಪದಲ್ಲಿರುವ ಬಹುಮಾನಗಳನ್ನು ಒಳಗೊಳ್ಳುತ್ತದೆ.

**ವಿವರಣೆ:-** ಈ ಅಧಿನಿಯಮದಲ್ಲಿ ಬಳಸಲಾದ "ಗಣಕಯಂತ್ರ" 'ಸಂವಹನ ಸಾಧನ' ಗಣಕಯಂತ್ರ ಜಾಲ, 'ಗಣಕಯಂತ್ರ ಸಂಪನ್ಮೂಲ', ಗಣಕಯಂತ್ರ ಜೋಡಣೆ(ಸಿಸ್ಟಂ),' ' ಸೈಬರ್ ಕೆಫೆ' ಮತ್ತು 'ವಿದ್ಯುನ್ಮಾನ ದಾಖಲೆ' ಈ ಪದಗಳು, ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ರಲ್ಲಿ

(2000ರ ಕೇಂದ್ರ ಅಧಿನಿಯಮ 21) ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು."

(ಡಿ) (12)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:-

"(12ಎ) "ಆನ್ ಲೈನ್ ಜೂಜಾಡುವಿಕೆ" ಎಂದರೆ (7)ನೇ ಖಂಡದಲ್ಲಿ ಪರಿಭಾಷಿಸಿದಂತೆ, ಜೂಜಾಡುವಿಕೆಯ ಉಪಕರಣಗಳ ಸಾಧನಗಳ ಮೂಲಕ ಆನ್‌ಲೈನ್‌ನಲ್ಲಿ ಆಡುವ ಪಂದ್ಯಗಳು ಮತ್ತು ಇದು ಗಣಕಯಂತ್ರ, ಗಣಕಯಂತ್ರ ಸಂಪನ್ಮೂಲ, ಗಣಕಯಂತ್ರ ಕಾರ್ಯಜಾಲ, ಗಣಕಯಂತ್ರ ಜೋಡಣೆ (ಸಿಸ್ಟಂ) ಅಥವಾ ಮೊಬೈಲ್ ಆಪ್ ಮೂಲಕ ಅಥವಾ ಅಂತರ್ಜಾಲ ಅಥವಾ ಯಾವುದೇ ಸಂವಹನ ಸಾಧನ, ವಿದ್ಯುನ್ಮಾನ ಅನ್ವಯಿಕೆ, ತಂತ್ರಾಂಶದ ಮೂಲಕ ಅಥವಾ ಯಾವುದೇ ವರ್ಚುವಲ್ ವೇದಿಕೆಯಲ್ಲಿ ಆಡುವ ಪಂದ್ಯಗಳನ್ನು ಒಳಗೊಳ್ಳುತ್ತದೆ.

(ಇ) (13)ನೇ ಖಂಡದ "ಎಂಬುದರಲ್ಲಿ" ಎಂಬ ಪದದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ರಲ್ಲಿ (2000ರ ಕೇಂದ್ರ ಅಧಿನಿಯಮ 21) ಪರಿಭಾಷಿಸಿದಂತೆ ಮನರಂಜನಾ ಕ್ಲಬ್ ಅಥವಾ ವರ್ಚುವಲ್ ವೇದಿಕೆಯಲ್ಲಿ, ಮೊಬೈಲ್ ಆಪ್ ಅಥವಾ ಅಂತರ್ಜಾಲ ಅಥವಾ ಯಾವುದೇ ಸಂವಹನ ಸಾಧನ, ವಿದ್ಯುನ್ಮಾನ ಅನ್ವಯಿಕೆ, ತಂತ್ರಾಂಶ, ಆನ್‌ಲೈನ್ ಜೂಜಾಡುವಿಕೆ ಮತ್ತು ಗಣಕಯಂತ್ರ ಸಂಪನ್ಮೂಲವನ್ನು ಒಳಗೊಂಡಂತೆ "

**3. 78ನೇ ಪ್ರಕರಣದ ತಿದ್ದುಪಡಿ;-** ಮೂಲ ಅಧಿನಿಯಮದ 78ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಎ) ಖಂಡದಲ್ಲಿ,-

(ಎ) " ಆವರಣ, ವಾಹನ, ನೌಕೆ ಅಥವಾ ಸ್ಥಳದ" ಎಂಬ ಪದಗಳ ತರುವಾಯ "ಅಥವಾ ಮಾಹಿತಿ ತಂತ್ರಜ್ಞಾನ ಅಧಿನಿಯಮ,2000ರಲ್ಲಿ (2000ರ ಕೇಂದ್ರ ಅಧಿನಿಯಮ 21) ಪರಿಭಾಷಿಸಿದಂತೆ ಗಣಕಯಂತ್ರ ಸಂಪನ್ಮೂಲ ಅಥವಾ ಮೊಬೈಲ್ ಅನ್ವಯಿಕೆ ಅಥವಾ ಅಂತರ್ಜಾಲ ಅಥವಾ ಯಾವುದೇ ಸಂವಹನ ಸಾಧನವನ್ನು ಒಳಗೊಂಡ ಸೈಬರ್ ತಾಣ ಅಥವಾ ಪಂದ್ಯ ಕಟ್ಟುವುದು ಅಥವಾ ಪಣ ಕಟ್ಟುವುದನ್ನು ಒಳಗೊಂಡಿರುವ ಆನ್‌ಲೈನ್ ಜೂಜಾಡುವಿಕೆ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

(i) (vi)ನೇ ಖಂಡದಲ್ಲಿ "ಅದೃಷ್ಟವನ್ನು" ಎಂಬ ಪದದ ತರುವಾಯ "ಅಥವಾ ಮತ್ತೊಬ್ಬರ ಕೌಶಲ್ಯವನ್ನು" ಎಂಬ ಪದವನ್ನು ಸೇರಿಸತಕ್ಕದ್ದು.

(ii) (vi)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(vii) ಹಣಹಾನಿ ಸಂಭವದ ಯಾವುದೇ ಕಾರ್ಯ ಅಥವಾ ಅನ್ಯಥಾ ಕೌಶಲ್ಯ ಪಂದ್ಯವನ್ನು ಒಳಗೊಂಡ ಫಲಿತಾಂಶ ಗೊತ್ತಿಲ್ಲದ ಪ್ರಸಂಗದ ಮೇಲೆ; ಅಥವಾ"

(iii) ಇದರ ಜೋಡಿತ ಖಂಡಿಕೆಯಲ್ಲಿ "ಒಂದು ವರುಷದವರೆಗೆ" ಎಂಬ ಪದಗಳ ಬದಲಾಗಿ "ಮೂರು ವರ್ಷಗಳವರೆಗೆ" ಎಂಬ ಪದಗಳನ್ನು ಹಾಗೂ "ಒಂದು ಸಾವಿರ" ಎಂಬ ಪದಗಳ ಬದಲಾಗಿ "ಒಂದು ಲಕ್ಷ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) ಪರಂತುಕದಲ್ಲಿ "ಒಂದು ತಿಂಗಳಿಗೆ" ಎಂಬ ಪದಗಳ ಬದಲಾಗಿ "ಆರು ತಿಂಗಳಿಗೆ" ಎಂಬ ಪದಗಳನ್ನು ಮತ್ತು "ಐದು ನೂರು" ಎಂಬ ಪದಗಳ ಬದಲಾಗಿ "ಹತ್ತು ಸಾವಿರ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

(ಬಿ) (2)ನೇ ಉಪಪ್ರಕರಣದಲ್ಲಿ,-

(i) "ಅಲ್ಲಿ ಹಾಜರಿದ್ದರೆ" ಎಂಬ ಪದಗಳ ತರುವಾಯ "ಅಥವಾ ನೆರವು ನೀಡಿದರೆ ಅಥವಾ ದುಷ್ಪ್ರೇರೇಪಿಸಿದರೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) "ಒಂದು ತಿಂಗಳವರೆಗೆ" ಎಂಬ ಪದಗಳ ಬದಲಾಗಿ "ಆರು ತಿಂಗಳವರೆಗೆ" ಎಂಬ ಪದಗಳನ್ನು ಮತ್ತು "ಐದುನೂರು" ಎಂಬ ಪದಗಳ ಬದಲಾಗಿ "ಹತ್ತು ಸಾವಿರ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

(ಸಿ) (3)ನೇ ಉಪಪ್ರಕರಣದಲ್ಲಿ "ಮೂರು ತಿಂಗಳುಗಳವರಗೆ" ಎಂಬ ಪದಗಳ ಬದಲಾಗಿ "ಒಂದು ವರ್ಷದವರೆಗೆ" ಮತ್ತು "ಮೂರು ನೂರು" ಎಂಬ ಪದಗಳ ಬದಲಾಗಿ "ಇಪ್ಪತ್ತು ಸಾವಿರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

**4. 79ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 79ನೇ ಪ್ರಕರಣದಲ್ಲಿ,-

(i) ಜೋಡಿತ ಖಂಡಿಕೆಯಲ್ಲಿ, "ಒಂದು ವರುಷದವರೆಗೆ" ಎಂಬ ಪದಗಳ ಬದಲಾಗಿ "ಮೂರು ವರ್ಷಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು "ಜುಲ್ಮಾನೆಯು" ಎಂಬ ಪದದ ಮೊದಲು "ಒಂದು ಲಕ್ಷ ರೂಪಾಯಿಗಳವರೆಗಿನ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಪರಂತುಕದಲ್ಲಿ,-

(ಎ) (ಎ) ಖಂಡದಲ್ಲಿ "ಮೂರು ತಿಂಗಳಿಗಿಂತ" ಎಂಬ ಪದಗಳ ಬದಲಾಗಿ "ಆರು ತಿಂಗಳಿಗಿಂತ" ಎಂಬ ಪದಗಳನ್ನು ಮತ್ತು "ಐದುನೂರು" ಎಂಬ ಪದಗಳ ಬದಲಾಗಿ "ಹತ್ತು ಸಾವಿರ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

(ಬಿ) (ಬಿ) ಖಂಡದಲ್ಲಿ "ಆರು ತಿಂಗಳಿಗಿಂತ" ಎಂಬ ಪದಗಳ ಬದಲಾಗಿ "ಒಂದು ವರ್ಷಕ್ಕಿಂತ" ಎಂಬ ಪದಗಳನ್ನು ಮತ್ತು "ಐದು ನೂರು" ಎಂಬ ಪದಗಳ ಬದಲಾಗಿ "ಹದಿನೈದು ಸಾವಿರ " ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು; ಮತ್ತು

(ಸಿ) (ಸಿ) ಖಂಡದಲ್ಲಿ "ಒಂಬತ್ತು ತಿಂಗಳಿಗಿಂತ" ಎಂಬ ಪದಗಳ ಬದಲಾಗಿ" ಹದಿನೆಂಟು ತಿಂಗಳಿಗಿಂತ" ಎಂಬ ಪದಗಳನ್ನು ಮತ್ತು "ಒಂದು ಸಾವಿರ" ಎಂಬ ಪದಗಳ ಬದಲಾಗಿ "ಇಪ್ಪತ್ತು ಸಾವಿರ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

**5. 80ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 80ನೇ ಪ್ರಕರಣದಲ್ಲಿ,-

(i) “ಒಂದು ವರುಷದವರೆಗೆ” ಎಂಬ ಪದಗಳ ಬದಲಾಗಿ “ಮೂರು ವರ್ಷಗಳವರೆಗೆ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು “ಜುಲ್ಮಾನೆಯಿಂದ” ಎಂಬ ಪದದ ಮೊದಲು “ಒಂದು ಲಕ್ಷ ರೂಪಾಯಿಗಳವರೆಗಿನ” ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಪರಂತುಕದಲ್ಲಿ,-

(ಎ) (ಎ) ಖಂಡದಲ್ಲಿ “ಒಂದು ತಿಂಗಳಿಗಿಂತ” ಎಂಬ ಪದಗಳ ಬದಲಾಗಿ “ಆರು ತಿಂಗಳಿಗಿಂತ” ಎಂಬ ಪದಗಳನ್ನು ಮತ್ತು “ಎರಡು ನೂರು” ಎಂಬ ಪದಗಳ ಬದಲಾಗಿ “ಹತ್ತು ಸಾವಿರ” ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

(ಬಿ) (ಬಿ) ಖಂಡದಲ್ಲಿ “ಮೂರು ತಿಂಗಳಿಗಿಂತ” ಎಂಬ ಪದಗಳ ಬದಲಾಗಿ “ಒಂದು ವರ್ಷಕ್ಕಿಂತ” ಎಂಬ ಪದಗಳನ್ನು ಮತ್ತು “ಎರಡು ನೂರು” ಎಂಬ ಪದಗಳ ಬದಲಾಗಿ “ಹದಿನೈದು ಸಾವಿರ ” ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು; ಮತ್ತು

(ಸಿ) (ಸಿ) ಖಂಡದಲ್ಲಿ “ಆರು ತಿಂಗಳುಗಳಿಗಿಂತ” ಎಂಬ ಪದಗಳ ಬದಲಾಗಿ” ಹದಿನೆಂಟು ತಿಂಗಳಿಗಿಂತ” ಎಂಬ ಪದಗಳನ್ನು ಮತ್ತು “ಐದು ನೂರು” ಎಂಬ ಪದಗಳ ಬದಲಾಗಿ “ಇಪ್ಪತ್ತು ಸಾವಿರ” ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

**6. 87ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 87ನೇ ಪ್ರಕರಣದಲ್ಲಿ,-

(ಎ) “ಯುಕ್ತವಾಗಿ ಶಂಕಿಸಲಾದರೆ” ಎಂಬ ಪದಗಳ ತರುವಾಯ “ಅಥವಾ ಅಂಥ ಜೂಜಾಟವಾಡುವುದಕ್ಕೆ ನೆರವಾದರೆ ಅಥವಾ ದುಷ್ಪ್ರೇರೇಪಿಸಿದರೆ” ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ಬಿ) “ಮೂರು ತಿಂಗಳವರೆಗೆ” ಎಂಬ ಪದಗಳ ಬದಲಾಗಿ “ಆರು ತಿಂಗಳವರೆಗೆ” ಎಂಬ ಪದಗಳನ್ನು ಹಾಗೂ “ಮೂರು ನೂರು” ಎಂಬ ಪದಗಳ ಬದಲಾಗಿ “ಹತ್ತು ಸಾವಿರ” ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**7. 114ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 114ನೇ ಪ್ರಕರಣದಲ್ಲಿ “ಜುಲ್ಮಾನೆಗೂ” ಎಂಬ ಪದದ ಮೊದಲು “ಇಪ್ಪತ್ತೈದು ಸಾವಿರಗಳಿಗೆ ಕಡಿಮೆಯಲ್ಲದ ಆದರೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ” ಎಂಬ ಪದಗಳನ್ನು ಸೇರಿಸತಕ್ಕದ್ದು.

**8. 128ಎ ಪ್ರಕರಣದ ಸೇರ್ಪಡೆ,-** ಮೂಲ ಅಧಿನಿಯಮದ 128ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“**128ಎ. ಕೆಲವು ಅಪರಾಧಗಳು ಸಂಜ್ಞೇಯ ಹಾಗೂ ಜಾಮೀನು ರಹಿತವಾಗಿರುವುದು.-**

(1) 87ನೇ ಪ್ರಕರಣವನ್ನು ಹೊರತುಪಡಿಸಿ ಅಧ್ಯಾಯ VIIರ ಅಡಿಯಲ್ಲಿನ ಎಲ್ಲಾ ಅಪರಾಧಗಳು ಮತ್ತು ಅಧ್ಯಾಯ VIIIರ 90, 108, 113, 114 ಹಾಗೂ 123ನೇ ಪ್ರಕರಣಗಳ ಅಡಿಯಲ್ಲಿನ ಎಲ್ಲಾ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನುರಹಿತವಾಗಿರತಕ್ಕದ್ದು;

(2) 87ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನಿಯವಾಗಿರತಕ್ಕದ್ದು.

**9. 176ನೇ ಪ್ರಕರಣದ ತಿದ್ದುಪಡಿ,-** ಮೂಲ ಅಧಿನಿಯಮದ 176ನೇ ಪ್ರಕರಣದಲ್ಲಿ, "ಮತ್ತು ಅಂಥ ಚಾತುರ್ಯದ ಆಟದಲ್ಲಿ ಭಾಗವಹಿಸುವ ವ್ಯಕ್ತಿಗಳು ಪಣಕಟ್ಟುವುದಕ್ಕೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

ಈ ಮುಂದಿನವುಗಳನ್ನು ಉಪಬಂಧಿಸುವುಕ್ಕಾಗಿ,-

(i) 87ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಾಗಿ ಮಾಡಿರುವುದನ್ನು ಹೊರತುಪಡಿಸಿ, ಅಧ್ಯಾಯ VIIರ ಅಡಿಯಲ್ಲಿನ ಮತ್ತು 90, 98,108,113, 114 ಮತ್ತು 123ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳನ್ನು ಸಂಜ್ಞೇಯ ಮತ್ತು ಜಾಮೀನುರಹಿತ ಅಪರಾಧಗಳನ್ನಾಗಿ ಮಾಡುವುದರ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು;

(ii) ಜೂಜಾಟದ ಹಾವಳಿಯನ್ನು ನಿಗ್ರಹಿಸುವುದಕ್ಕೆ ಸೈಬರ್ ತಾಣ, ಮೊಬೈಲ್ ಆಪ್ ಮೂಲಕ ಜೂಜಾಟದ ಪ್ರಕ್ರಿಯೆಯಲ್ಲಿ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ರಲ್ಲಿ ಪರಿಭಾಷಿದ ಗಣಕಯಂತ್ರ ಸಂಪನ್ಮೂಲಗಳನ್ನು ಅಥವಾ ಯಾವುದೇ ಸಂವಹನ ಸಾಧನವನ್ನು ಒಳಗೊಂಡಂತೆ ಸೈಬರ್ ತಾಣದ ಬಳಕೆಯನ್ನು ಸೇರಿಸುವುದಕ್ಕಾಗಿ;

(iii) ಸುವ್ಯವಸ್ಥಿತ ನಾಗರೀಕ ನಡವಳಿಕೆಗೆ ಸಂಬಂಧಿಸಿದಂತೆ ಜೂಜಾಟಕ್ಕಾಗಿನ ದಂಡನೆಯನ್ನು ಹೆಚ್ಚಿಸಲು ಹಾಗೂ ಜೂಜಾಟದ ವ್ಯಸನದಿಂದ ಅವರನ್ನು ತಪ್ಪಿಸುವುದಕ್ಕಾಗಿ;

(iv) ಇತರ ಕೆಲವು ಅನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡುವುದಕ್ಕಾಗಿ,

-ಕರ್ನಾಟಕ ಪೊಲೀಸ್ ಅಧಿನಿಯಮ, 1963ನ್ನು (1964ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ, ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಆರಗ ಜ್ಞಾನೇಂದ್ರ**
ಗೃಹ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

# ಅನುಬಂಧ
# ಕರ್ನಾಟಕ ಪೊಲೀಸು ಅಧಿನಿಯಮ, 1963ರ
# (1964 ರ ಅಧಿನಿಯಮ ಸಂಖ್ಯೆ. 4) ಉದ್ಧೃತ ಭಾಗ

**XX XX XX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

**XX XX XX**

(3) ``ಸಾಮಾನ್ಯ ಜೂಜಿನ ಮನೆ'' ಎಂದರೆ, ಒಂದು ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ, ಅಥವಾ ಸ್ಥಳದ ಒಡೆಯನ, ಆಧಿಭೋಗದಾರನ ಅಥವಾ ಅದನ್ನು ನೋಡಿಕೊಳ್ಳುವವನ ಅಥವಾ ಅದನ್ನು ಉಪಯೋಗಿಸಲು ಹಕ್ಕುಳ್ಳವನಾಗಿರಲಿ ಇಲ್ಲದಿರಲಿ ಅದನ್ನು ಉಪಯೋಗಿಸುತ್ತಿರುವ ವ್ಯಕ್ತಿಯ ಲಾಭ ಅಥವಾ ಸಂಪಾದನೆ, ಜೂಜಿನ ಉಪಕರಣಗಳನ್ನು ಇಟ್ಟಿರುವ ಅಥವಾ ಉಪಯೋಗಿಸುತ್ತಿರುವ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳ; ಹಾಗೂ ಅಂಥ ಲಾಭ ಅಥವಾ ಸಂಪಾದನೆಯು ಜೂಜಿನ ಉಪಕರಣಗಳ ಅಥವಾ ಕಟ್ಟಡ ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳದ ಉಪಯೋಗದ ಬಗ್ಗೆ ಚಾರ್ಜಿನ ರೂಪದಲ್ಲಿರುವ ಲಾಭ ಅಥವಾ ಸಂಪಾದನೆಯಾಗಿದ್ದು ಅಥವಾ ಬೇರೆ ಯಾವುದೇ ಪ್ರಕಾರದ್ದಾಗಿದ್ದು ಅಥವಾ ಜೂಜಿನ ಉಪಕರಣಗಳ ಅಥವಾ ಕಟ್ಟಡದ, ಕೊಠಡಿಯ, ಡೇರೆಯ, ಆವರಣದ, ವಾಹನದ, ನೌಕೆಯ ಅಥವಾ ಜೂಜಿನ ಉದ್ದೇಶದ ಸ್ಥಳದ ಉಪಯೋಗದೊಂದಿಗೆ ಸೌಲಭ್ಯದ ಉಪಯೋಗದ ಬಗ್ಗೆ ಚಂದಾ ರೂಪದಲ್ಲಿ ಅಥವಾ ಇತರ ಪಾವತಿಯ ರೂಪದಲ್ಲಿದ್ದುದಾಗಿರತಕ್ಕದ್ದು.

**ವಿವರಣೆ :-** ಈ ಖಂಡದಲ್ಲಿ 'ವ್ಯಕ್ತಿ' ಎಂಬುವಲ್ಲಿ, ಕಂಪೆನಿ, ಸಂಘ, ಕ್ಲಬ್ ಅಥವಾ ವ್ಯಕ್ತಿಗಳ ಇತರ ನಿಕಾಯ ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ ಒಳಗೊಂಡಿರುತ್ತದೆ.

**XX XX XX**

(7) ``ಜೂಜಾಡುವುದು'' ಎಂಬುದರಲ್ಲಿ ಲಾಟರಿ ಸೇರುವುದಿಲ್ಲ; ಆದರೆ ಕುದುರೆ ಪಂದ್ಯದಲ್ಲಿ ಪಣಕಟ್ಟುವುದು;

(i) ಅಂಥ ಪಂದ್ಯವು ನಡೆಯುವ ದಿನದಂದು; ಮತ್ತು

(ii) ಪಂದ್ಯ ನಡೆಯಲಿರುವ ಪಂದ್ಯ ಪ್ರದೇಶದ ಲೈಸೆನ್ಸುದಾರನು ಪಂದ್ಯ ಪ್ರದೇಶದ ಸಂಬಂಧದಲ್ಲಿ, ಕರ್ನಾಟಕ ರೇಸ್‌ಕೋರ್ಸ್‌ಸ್ ಲೈಸೆನ್ಸು ಕೊಡುವಿಕೆ ಅಧಿನಿಯಮದ (1952ರ ಮೈಸೂರು ಅಧಿನಿಯಮದ viii) 4ನೆಯ ಪ್ರಕರಣದ ಮೇರೆಗೆ ಕೊಡಲಾದ ಲೈಸೆನ್ಸಿನ ನಿರ್ಬಂಧಗಳ ಮೇರೆಗೆ ಈ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿರಿಸಿರುವ ಆವರಣದಲ್ಲಿ; ಮತ್ತು

(iii) ಅಂಥ ಅವರಣದಲ್ಲಿ ಹಾಜರಿರುವ ವ್ಯಕ್ತಿ ಒಂದು ಕಡೆ ಮತ್ತು ಅಂಥ ಲೈಸೆನ್ಸುದಾರನು ಅಥವಾ ಅಂಥ ಲೈಸೆನ್ಸುದಾರನಿಂದ ಸದರಿ ಲೈಸೆನ್ಸಿನ ನಿರ್ಬಂಧಗಳಿಗನುಸಾರವಾಗಿ ಲೈಸೆನ್ಸು ಪಡೆದುಕೊಂಡ ಇತರ ವ್ಯಕ್ತಿ ಇನ್ನೊಂದು ಕಡೆ – ಈ ರೀತಿ ಅವರಿಬ್ಬರ ನಡುವೆ ಮತ್ತು ಅಂಥ ಲೈಸೆನ್ಸಿನಿಂದ ಅನುಮತಿ ಕೊಡಲ್ಪಡಬೇಕಾದಂಥ ಸಾಧನದಿಂದ ಪಂದ್ಯ ಅಥವಾ ಪಣ ಕಟ್ಟುವುದನ್ನುಳಿದು ಯಾವುದಾದರೂ ಜೂಜಾಟದ ಸಂದರ್ಭದಲ್ಲಿನ ಎಲ್ಲ ಪ್ರಕಾರದ ಪಂದ್ಯ ಅಥವಾ ಪಣ ಕಟ್ಟುವುದು ಸೇರುತ್ತದೆ.

**ವಿವರಣೆ :-** ಈ ಖಂಡದಲ್ಲಿ,-

(i) ''ಪಂದ್ಯ ಕಟ್ಟುವುದು ಅಥವಾ ಪಣ ಕಟ್ಟುವುದು' ಎಂಬುದರಲ್ಲಿ, ಪಣಗಳ ವಸೂಲಿ ಅಥವಾ ಅವುಗಳಿಗಾಗಿ ಕೋರಿಕೆ ಅಥವಾ ಅಂಥ ಪಂದ್ಯ ಅಥವಾ ಪಣ ಕಟ್ಟುವುದಕ್ಕೆ ಅಂಥ ವಸೂಲಿ, ಕೋರಿಕೆ, ಸ್ವೀಕಾರ ಅಥವಾ ಹಂಚಿಕೆಗೆ ಸಹಾಯವಾಗಲು ಅಥವಾ ಅನುಕೂಲವಾಗಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಲಾಭಗಳ ಅಥವಾ ಹಣ ಅಥವಾ ಇತರ ರೂಪದಲ್ಲಿರುವ ಬಹುಮಾನಗಳ ಸ್ವೀಕಾರ, ಅಥವಾ ಹಂಚಿಕೆ ಇವುಗಳು ಸೇರುತ್ತವೆ.

(ii) ``ಜೂಜಾಟ'' ಎಂಬುದರಲ್ಲಿ ಜೂಜಾಟ ಮತ್ತು ಚಾತುರ್ಯ ಸೇರಿರುವ ಆಟ ಮತ್ತು ಜೂಜಾಟವೆಂದು ಅಥವಾ ಜೂಜಾಟ ಮತ್ತು ಚಾತುರ್ಯ ಸೇರಿರುವುದೆಂದು ನಟಿಸುವ ಆಟ, ಇವುಗಳು ಸೇರುತ್ತವೆ. ಆದರೆ ಅಂಗಸಾಧನೆಯ ಆಟ ಅಥವಾ ಕ್ರೀಡೆ ಇದರಲ್ಲಿ ಸೇರುವುದಿಲ್ಲ.

**XX XX XX**

(11) ``ಜೂಜಾಟದ ಉಪಕರಣಗಳು'' ಎಂಬುದರಲ್ಲಿ, ಜೂಜಿನ ಪದಾರ್ಥವಾಗಿ ಅಥವಾ ಸಾಧನವಾಗಿ ಉಪಯೋಗಿಸಲಾದ ಅಥವಾ ಉಪಯೋಗಿಸಲು ಉದ್ದೇಶಿಸಲಾದ ಯಾವುದೇ ವಸ್ತು, ಯಾವುದೇ ಜೂಜಾಟದ ಅಭಿಲೇಖ, ಸಾಕ್ಷ್ಯ ಅಥವಾ ರಿಜಿಸ್ಟರಂತೆ ಉಪಯೋಗಿಸಲಾದ ಅಥವಾ ಉಪಯೋಗಿಸಲು ಉದ್ದೇಶಿಸಲಾದ ಯಾವುದೇ ದಸ್ತಾವೇಜು, ಯಾವುದೇ ಜೂಜಾಟದ ಉತ್ಪತ್ತಿಗಳು ಮತ್ತು ಯಾವುದೇ ಜೂಜಾಟದ ಸಂಬಂಧದಲ್ಲಿ ಹಂಚಲಾದ ಅಥವಾ ಹಂಚಲು ಉದ್ದೇಶಿಸಲಾದ ಯಾವುವೇ ಲಾಭಗಳು, ಹಣದ ರೂಪಗಳು ಅಥವಾ ಹಣದ ಅಥವಾ ಬೇರೆ ರೂಪದಲ್ಲಿರುವ ಬಹುಮಾನಗಳು ಒಳಗೊಳ್ಳುತ್ತವೆ.

**XX XX XX**

(13) ``ಸ್ಥಳ'' ಎಂಬುದರಲ್ಲಿ ಖಾಯಂ ಆದ ಅಥವಾ ಹಂಗಾಮಿಯಾದ ಕಟ್ಟಡ, ಡೇರೆ, ಮಂಟಪ ಅಥವಾ ಇತರ ನಿರ್ಮಾಣ ಇವು ಆವೃತವಾದ ಅಥವಾ ತೆರೆದ ಯಾವುದೇ ಪ್ರದೇಶ.

**XX XX XX**

(18) ``ಸಾರ್ವಜನಿಕ ಸ್ಥಳ'' ಎಂಬುದರಲ್ಲಿ, ಮುಂಗರೆ, ಪ್ರತಿಯೊಂದು ಸಾರ್ವಜನಿಕ ಕಟ್ಟಡದ ಅಥವಾ ಸ್ಮಾರಕದ ಪ್ರಕಾರ ಮತ್ತು ನೀರು ತೆಗೆದುಕೊಳ್ಳುವುದಕ್ಕಾಗಿ, ಒಗೆಯುವುದಕ್ಕಾಗಿ ಅಥವಾ ಸ್ನಾನಕ್ಕಾಗಿ ಅಥವಾ ವಿಹಾರದ ಉದ್ದೇಶಕ್ಕಾಗಿ ಸಾರ್ವಜನಿಕರಿಗೆ ಮೀಸಲಿರಿಸಿರುವಂಥ ಎಲ್ಲ ಸ್ಥಳಗಳು ಒಳಗೊಳ್ಳುತ್ತವೆ;

**XX XX XX**

(20) ``ಬೀದಿ'' ಎಂಬುದರಲ್ಲಿ ಯಾವುದೇ ಹೆದ್ದಾರಿ, ಸೇತುವೆ, ಒಡ್ಡಿನ ಮೇಲಿನ ದಾರಿ, ಸೇತುವೆ ತಾಕದ ದಾರಿ, ವೈಯಡಕ್ ಕಮಾನು, ಹಡಗುಕಟ್ಟೆ ಅಥವಾ ಬಂದರುಕಟ್ಟೆ ಅಥವಾ ಸಾರ್ವಜನಿಕರಿಗೆ ಅವಕಾಶವಿರುವ ಯಾವುದೇ ರಸ್ತೆ, ಓಣಿ, ಕಾಲುದಾರಿ, ಚೌಕ, ಅಂಗಣ, ಸಂದಿ ಅಥವಾ ಹಾದಿ ಅದು ಸಾರ್ವಜನಿಕ ರಸ್ತೆಯಾಗಿರಲಿ ಅಥವಾ ಇಲ್ಲದಿರಲಿ, ಒಳಗೊಳ್ಳುತ್ತದೆ;

**XX XX XX**

(23) ``ವಾಹನ'' ಎಂದರೆ ಯಾವುದೇ ಗಾಡಿ, ಬಂಡಿ, ವ್ಯಾನು, ಸಾಮಾನು ಗಾಡಿ, ಸಾಮಾನು ಎಳೆಯುವ ಕುದುರೆಗಾಡಿ, ಟ್ರಕ್, ಕೈಗಾಡಿ ಅಥವಾ ಯಾವುದೇ ಬಗೆಯ ಇತರ ವಾಹನ ಮತ್ತು ಅದರಲ್ಲಿ ಬೈಸಿಕಲ್ಲು ಮತ್ತು ಮೂರು ಚಕ್ರದ ಸೈಕಲ್ಲು, ರಿಕ್ಷಾ, ಮೋಟಾರು ಗಾಡಿ, ನೌಕೆ ಅಥವಾ ವಿಮಾನ ಇವುಗಳೂ ಒಳಗೊಳ್ಳುತ್ತವೆ.

**XX XX XX**

**78. ಕೆಲವು ಬಗೆಯ ಜೂಜುಗಳನ್ನು ಪ್ರಾರಂಭಿಸುವುದು ಇತ್ಯಾದಿ.-**

(1) ಯಾವೊಬ್ಬನು,-

(ಎ) ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳದ ಒಡೆಯನು ಅಥವಾ ಆಧಿಭೋಗದಾರನು ಅಥವಾ ಅದನ್ನು ಉಪಯೋಗಿಸುವವನು ಆಗಿದ್ದು ಅದನ್ನು

(i) ಕುದುರೆ ಪಂದ್ಯದ ಮೇಲೆ, ಅಥವಾ

(ii) ಹತ್ತಿ, ಚಿನ್ನ-ಬೆಳ್ಳಿ, ಅಥವಾ ಇತರ ವಸ್ತುವಿನ ಮಾರುಕಟ್ಟೆ ಬೆಲೆಯ ಮೇಲೆ ಅಂತಹ ಬೆಲೆಯನ್ನು ಸೂಚಿಸಲು ಉಪಯೋಗಿಸುವ ಸಂಖ್ಯೆಯ ಅಂಕಗಳ ಮೇಲೆ; ಅಥವಾ

(iii) ಅಂತಹ ಯಾವುದೇ ವಸ್ತುವಿನ ಮಾರುಕಟ್ಟೆಯ ಬೆಲೆಯ ಮೊಬಲಗಿನ ಅಥವಾ ಅದರಲ್ಲಾಗುವ ವ್ಯತ್ಯಾಸಗಳ ಮೇಲೆ ಅಥವಾ ಅಂತಹ ವ್ಯತ್ಯಾಸವನ್ನು ಸೂಚಿಸಲು ಉಪಯೋಗಿಸುವ ಸಂಖ್ಯೆಯ ಅಂಕಗಳ ಮೇಲೆ; ಅಥವಾ

(iv) ಯಾವುದೇ ನಿಧಿಪತ್ರ (ಸ್ಟಾಕ್) ಷೇರಿನ ಮಾರುಕಟ್ಟೆಯ ಬೆಲೆಯ ಮೇಲೆ ಅಥವಾ ಅಂತಹ ಬೆಲೆಯನ್ನು ಸೂಚಿಸಲು ಉಪಯೋಗಿಸುವ ಸಂಖ್ಯೆಯ ಅಂಕಗಳ ಮೇಲೆ; ಅಥವಾ

(v) ಸಾರ್ವಜನಿಕ ಸ್ಥಳವನ್ನು ಉಪಯೋಗಿಸುವ ಯಾವುದೇ ಮೋಟಾರು ವಾಹನದ ನೋಂದಣಿ ಸಂಖ್ಯೆಯ ಮೇಲೆ ಅಥವಾ ನೋಂದಣಿ ಸಂಖ್ಯೆಯ ಅಂಕಗಳ ಮೇಲೆ; ಅಥವಾ

(vi) ಅದೃಷ್ಟವನ್ನು ಅವಲಂಬಿಸಿರುವ ಹಣ ಅಥವಾ ಇತರ ರೂಪದಲ್ಲಿರುವ ಲಾಭಗಳ ಅಥವಾ ಬಹುಮಾನಗಳ ಸ್ವೀಕಾರ ಅಥವಾ ಹಂಚಿಕೆಯಿಂದ ಕೂಡಿರುವ ಯಾವುದೇ ವ್ಯವಹಾರದ ಮೇಲೆ ಅಥವಾ ಪಂದ್ಯ ಅಥವಾ ಪಣದ ಯೋಜನೆಯ ಮೇಲೆ; ಜೂಜಾಟವಾಡುವ ಉದ್ದೇಶಕ್ಕಾಗಿ ತೆರೆದರೆ, ಇಟ್ಟರೆ ಅಥವಾ ಉಪಯೋಗಿಸಿದರೆ; ಅಥವಾ

(ಬಿ) ಅಂತಹ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ, ಅಥವಾ ಸ್ಥಳದ ಒಡೆಯ ಅಥವಾ ಅಧಿಭೋಗದಾರನಾಗಿದ್ದು ಮೇಲೆ ಹೇಳಿದ ಯಾವುದೆ ರೀತಿಯ ಜೂಜಾಟವಾಡುವ ಉದ್ದೇಶಕ್ಕಾಗಿ ಇತರ ಯಾವನೇ ವ್ಯಕ್ತಿಯು ಅದನ್ನು ಅಧಿಭೋಗಿಸಲು, ಇಟ್ಟುಕೊಳ್ಳಲು ಅಥವಾ ಉಪಯೋಗಿಸಲು ತಿಳಿದೂ ಅಥವಾ ಬುದ್ಧಿಪೂರ್ವಕವಾಗಿ ಅನುಮತಿ ಕೊಟ್ಟರೆ, ಅಥವಾ

(ಸಿ) ಮೇಲೆ ಹೇಳಿದ ಯಾವುದೇ ರೀತಿಯಲ್ಲಿ ಜೂಜಾಟವಾಡುವ ಉದ್ದೇಶಕ್ಕಾಗಿ ತೆರೆದ ಆಧಿಭೋಗಿಸಿದ, ಇಟ್ಟುಕೊಂಡ ಅಥವಾ ಉಪಯೋಗಿಸಿದ ಅಂತಹ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ ನೌಕೆ ಅಥವಾ ಸ್ಥಳದ ಮೇಲ್ವಿಚಾರಣೆ ಅಥವಾ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರೆ ಅಥವಾ ಅದರ ವ್ಯವಹಾರ ನಡೆಯಿಸುವುದರಲ್ಲಿ ಯಾವುದೇ ರೀತಿಯಲ್ಲಿ ಸಹಾಯ ಮಾಡುತ್ತಿದ್ದರೆ, ಅಥವಾ

(ಡಿ) ಅಂಥ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ ನೌಕೆ ಅಥವಾ ಸ್ಥಳಕ್ಕೆ ಆಗಾಗ ಬರುವ ವ್ಯಕ್ತಿಗಳಿಗೆ ಮೇಲೆ ಹೇಳಿದ ಯಾವುದೇ ವಸ್ತು ರೀತಿಯಲ್ಲಿ ಜೂಜಾಟವಾಡುವ ಉದ್ದೇಶಕ್ಕಾಗಿ, ಸಾಲ ಕೊಡುತ್ತಿದ್ದರೆ ಅಥವಾ ಹಣ ಒದಗಿಸುತ್ತಿದ್ದರೆ,

-ಅವನು, ಅಪರಾಧ ಸಿದ್ಧಪಟ್ಟ ಬಳಿಕ, ಒಂದು ವರುಷದವರೆಗೆ ವಿಸ್ತರಿಸಬಹುದುದಾದ ಕಾರವಾಸ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ಅಭಿಲೇಖಿಸಬೇಕಾದ ವಿಶೇಷ ಕಾರಣಗಳಿಲ್ಲದಿರುವಾಗ, ಈ ಉಪಪ್ರಕರಣದ ಮೇರೆಗೆ ಯಾವುದೇ ಅಪರಾಧದ ಬಗ್ಗೆ ಅಪರಾಧ ಸಿದ್ಧಪಟ್ಟ ಬಳಿಕ ಅಪರಾಧಿಗೆ ವಿಧಿಸಿದ ದಂಡನೆಯು ಒಂದು ತಿಂಗಳಿಗೆ ಕಡಿಮೆಯಲ್ಲದ ಕಾರಾವಾಸ ಅಥವಾ ಐದು ನೂರು ರೂಪಾಯಿಗಳಿಗೆ ಕಡಿಮೆಯಿಲ್ಲದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾವನೇ ವ್ಯಕ್ತಿಯು, (1)ನೆಯ ಉಪಪ್ರಕರಣದಲ್ಲಿ ನಿರ್ದೇಶಿಸಿದ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ, ಅಥವಾ ¸ ಸ್ಥಳದಲ್ಲಿ, ಆ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ರೀತಿಯಲ್ಲಿ ಜೂಜಾಟವಾಡುತ್ತಿರುವುದು ಕಂಡುಬಂದರೆ, ಅಥವಾ ಅಂತಹ ಯಾವುದೇ ರೀತಿಯಲ್ಲಿ ಜೂಜಾಟವಾಡುವ ಉದ್ದೇಶಕ್ಕಾಗಿ ಅಲ್ಲಿ ಹಾಜರಿದ್ದರೆ, ಅಪರಾಧ ಸಿದ್ಧಪಟ್ಟ ಬಳಿಕ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

ಅಂತಹ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ ನೌಕೆ ಅಥವಾ ಸ್ಥಳದಲ್ಲಿ (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ರೀತಿಯಲ್ಲಿ ಜೂಜಾಟ ನಡೆಯುತ್ತಿರುವಾಗ

ಅಲ್ಲಿ ಕಂಡು ಬಂದ ಯಾವನೇ ವ್ಯಕ್ತಿಯು, ತದ್ವಿರುದ್ಧ ರುಜುವಾತು ಆಗುವವರೆಗೆ ಅಂತಹ ರೀತಿಯಲ್ಲಿ ಜೂಜಾಟವಾಡುವ ಉದ್ದೇಶಕ್ಕಾಗಿ ಅಲ್ಲಿ ಇದ್ದನೆಂದು ಭಾವಿಸಲ್ಪಡತಕ್ಕದ್ದು.

(3) ಯಾವನೇ ವ್ಯಕ್ತಿಯು, (1)ನೆಯ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವೊಂದು ರೀತಿಯಲ್ಲಿ ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಮಾರ್ಗದಲ್ಲಿ ಅಥವಾ ಸಾರ್ವಜನಿಕರಿಗೆ ಪ್ರವೇಶವಿರುವ ಅಥವಾ ಪ್ರವೇಶಹೊಂದಲು ಅನುಮತಿಯಿರುವ ಯಾವುದೇ ಸ್ಥಳದಲ್ಲಿ ಜೂಜಾಟವಾಡುತ್ತಿರುವುದು ಕಂಡುಬಂದರೆ, ಅಪರಾಧ ಸಿದ್ಧಪಟ್ಟ ಬಳಿಕ, ಮೂರು ತಿಂಗಳುಗಳವರೆಗೆ ವಿತರಿಸಬಹುದಾದ ಕಾರಾವಾಸ ಅಥವಾ ಮೂರು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

XX XX XX

**79. ಸಾಮಾನ್ಯ ಜೂಜಿನ ಮನೆಯನ್ನು ಇಡುವುದು, ಇತ್ಯಾದಿ.-** ಯಾವೊಬ್ಬ ವ್ಯಕ್ತಿಯು,

(ಎ) ಸಾಮಾನ್ಯ ಜೂಜಿನ ಮನೆಯ ಉದ್ದೇಶಕ್ಕಾಗಿ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳವನ್ನು ತೆರೆದರೆ, ಇರಿಸಿದರೆ ಅಥವಾ ಉಪಯೋಗಿಸಿದರೆ;

(ಬಿ) ಅಂತಹ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳದ ಒಡೆಯನಾಗಿದ್ದು ಅಥವಾ ಆಧಿಭೋಗದಾರನಾಗಿದ್ದು ಅದನ್ನು ಮೇಲೆ ಹೇಳಿದ ಉದ್ದೇಶಕ್ಕಾಗಿ ಬೇರೊಬ್ಬ ವ್ಯಕ್ತಿಯಿಂದ ತೆರೆಯಲು, ಸ್ವಾಧೀನಪಡಿಸಿಕೊಳ್ಳಲು ಇಡಲು ಅಥವಾ ಉಪಯೋಗಿಸಲು ತಿಳಿದೂ ಅಥವಾ ಬುದ್ಧಿಪೂರ್ವಕವಾಗಿ ಅನುಮತಿ ಕೊಟ್ಟರೆ;

(ಸಿ) ಮೇಲೆ ಹೇಳಿದ ಉದ್ದೇಶಕ್ಕಾಗಿ ಪ್ರಾರಂಭಿಸಿದ, ಅಧಿಭೋಗಿಸಿದ, ಇಟ್ಟುಕೊಂಡ ಅಥವಾ ಉಪಯೋಗಿಸಿದ ಅಂತಹ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ, ಅಥವಾ ಸ್ಥಳದ ಮೇಲ್ವಿಚಾರಣೆ ಅಥವಾ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರೆ ಅಥವಾ ಅದರ ವ್ಯವಹಾರ ನಡೆಯಿಸುವುದರಲ್ಲಿ ಯಾವುದೇ ರೀತಿಯಲ್ಲಿ ಸಹಾಯ ಮಾಡುತ್ತಿದ್ದರೆ; ಅಥವಾ

(ಡಿ) ಅಂತಹ ಯಾವುದೇ ಕಟ್ಟಡ, ಕೊಠಡಿ, ಡೇರೆ, ಆವರಣ, ವಾಹನ, ನೌಕೆ ಅಥವಾ ಸ್ಥಳಕ್ಕೆ ಆಗಾಗ ಬರುವ ವ್ಯಕ್ತಿಗಳಿಗೆ ಜೂಜಾಟವಾಡುವ ಉದ್ದೇಶಕ್ಕಾಗಿ, ಸಾಲಕೊಡುತ್ತಿದ್ದರೆ, ಅಥವಾ ಹಣ ಒದಗಿಸುತ್ತಿದ್ದರೆ,

-ಅವನು, ಅಪರಾಧ ಸಿದ್ಧಪಟ್ಟ ಬಳಿಕ, ಒಂದು ವರುಷದವರೆಗೆ ವಿತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು,-

(ಎ) ಮೊದಲನೆಯ ಅಪರಾಧಕ್ಕಾಗಿ, ಇಂತಹ ಕಾರಾವಾಸವು ಮೂರು ತಿಂಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ ಮತ್ತು ಜುಲ್ಮಾನೆಯು ಐದುನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದಲ್ಲ;

(ಬಿ) ಎರಡನೆಯ ಅಪರಾಧಕ್ಕಾಗಿ, ಅಂತಹ ಕಾರಾವಾಸವು ಆರು ತಿಂಗಳಿಗಿಂತ ಕಡಿಮೆಯಾಗತಕ್ಕದಲ್ಲ ಮತ್ತು ಜುಲ್ಮಾನೆಯು ಐದು ನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದಲ್ಲ; ಮತ್ತು

(ಸಿ) ಮೂರನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಅಂತಹ ಕಾರಾವಾಸವು, ಒಂಬತ್ತು ತಿಂಗಳಿಗಿಂತ ಕಡಿಮೆಯಾಗತಕ್ಕದಲ್ಲ ಮತ್ತು ಜುಲ್ಮಾನೆಯು ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ.

**XX XX XX**

**80. ಸಾಮಾನ್ಯ ಜೂಜಿನ ಮನೆಯಲ್ಲಿ ಜೂಜಾಟ ಇತ್ಯಾದಿ.-** ಯಾವೊಬ್ಬನು ಸಾಮಾನ್ಯ ಜೂಜಿನ ಮನೆಯಲ್ಲಿ ಜೂಜಾಟವಾಡುತ್ತಿದ್ದುದು ಅಥವಾ ಜೂಜಾಟವಾಡುವ ಉದ್ದೇಶಕ್ಕಾಗಿ

ಹಾಜರಿದ್ದುದು ಕಂಡುಬಂದರೆ, ಅವನು ಅಪರಾಧ ಸಿದ್ಧಪಟ್ಟ ಬಳಿಕ, ಒಂದು ವರುಷದವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು,-

(ಎ) ಮೊದಲನೆಯ ಅಪರಾಧಕ್ಕಾಗಿ, ಅಂತಹ ಕಾರಾವಾಸವು ಒಂದು ತಿಂಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ ಮತ್ತು ಜುಲ್ಮಾನೆಯು ಎರಡು ನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ;

(ಬಿ) ಎರಡನೆಯ ಅಪರಾಧಕ್ಕಾಗಿ, ಅಂತಹ ಕಾರಾವಾಸವು ಮೂರು ತಿಂಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ ಮತ್ತು ಜುಲ್ಮಾನೆಯು ಎರಡು ನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ; ಮತ್ತು

(ಸಿ) ಮೂರನೆಯ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಕಾರಾವಾಸವು ಆರು ತಿಂಗಳುಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ ಮತ್ತು ಜುಲ್ಮಾನೆಯು ಐದು ನೂರು ರೂಪಾಯಿಗಳಿಗಿಂತ ಕಡಿಮೆಯಾಗತಕ್ಕದ್ದಲ್ಲ.

**XX XX XX**

**87. ಸಾರ್ವಜನಿಕ ಬೀದಿಗಳಲ್ಲಿ ಜೂಜಾಟ.-** ಯಾವನೊಬ್ಬನು, ಯಾವುದೇ ಸಾರ್ವಜನಿಕ ಬೀದಿಯಲ್ಲಿ ಅಥವಾ ಮಾರ್ಗದಲ್ಲಿ ಅಥವಾ ಸಾರ್ವಜನಿಕರಿಗೆ ಪ್ರವೇಶಿಸಿರುವ ಅಥವಾ ಪ್ರವೇಶಕ್ಕೆ ಅನುಮತಿ ಇರುವ ಯಾವುದೇ ಸ್ಥಳದಲ್ಲಿ ಅಥವಾ ಯಾವುದೇ ಕುದುರೆ ಪಂದ್ಯದ ಸ್ಥಳದಲ್ಲಿ ಜೂಜಾಟವಾಡುತ್ತಿದ್ದರೆ ಅಥವಾ ಜೂಜಾಟವಾಡುತ್ತಿರುವವನೆಂದು ಯುಕ್ತವಾಗಿ ಶಂಕಿಸಲಾದರೆ, ಅಪರಾಧ ಸಿದ್ಧಪಟ್ಟ ಮೇಲೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಮೂರು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಅಂಥ ಜೂಜಾಟವು ಪಂದ್ಯ ಅಥವಾ ಪಣವನ್ನೊಳಗೊಂಡಿದ್ದರೆ, ಹಾಗೆ ಜೂಜಾಡುತ್ತಿರುವ, ಅಂಥಹ ಯಾವನೇ ವ್ಯಕ್ತಿಯು, ಅಪರಾಧ ಸಿದ್ಧಪಟ್ಟ ಮೇಲೆ, 80ನೆಯ ಪ್ರಕರಣದಲ್ಲಿ ನಿರ್ದೇಶಿಸಲಿರುವ ರೀತಿಯಲ್ಲಿ ಮತ್ತು ಅಷ್ಟುಮಟ್ಟಿಗೆ ದಂಡನೀಯನಾಗತಕ್ಕದ್ದು ಮತ್ತು ಅವನ ಬಳಿ ಕಂಡುಬಂದ ಎಲ್ಲ ಹಣವು ಸರಕಾರಕ್ಕೆ ಮುಟ್ಟುಗೋಲಾಗತಕ್ಕದ್ದು.

ಯಾರೇ ಪೊಲೀಸ್ ಅಧಿಕಾರಿಯು, ಅಂಥ ಸಾರ್ವಜನಿಕ ಬೀದಿಯಲ್ಲಿ, ಮಾರ್ಗದಲ್ಲಿ, ಸ್ಥಳದಲ್ಲಿ ಅಥವಾ ಕುದುರೆ ಪಂದ್ಯದ ಸ್ಥಳದಲ್ಲಿ ಅಥವಾ ತಾನು ಹಾಗೆ ದಸ್ತಗಿರಿ ಮಾಡುವ ವ್ಯಕ್ತಿಗಳ ಮೇಲೆ ಅಥವಾ ಹತ್ತಿರ ದೊರೆತ ಜೂಜಾಟದ ಸಲಕರಣೆಗಳೆಂದು ಯುಕ್ತವಾಗಿ ಶಂಕಿಸಲಾದ ಎಲ್ಲ ವಸ್ತುಗಳನ್ನು ವಶಪಡಿಸಿಕೊಳ್ಳಬಹುದು ಮತ್ತು ಮ್ಯಾಜಿಸ್ಟ್ರೇಟನು, ಅಪರಾಧಿಯ ಅಪರಾಧ ಸಿದ್ಧಪಟ್ಟ ಮೇಲೆ, ಅಂಥ ಸಲಕರಣೆಗಳನ್ನು ಕೂಡಲೇ ನಾಶಪಡಿಸುವಂತೆ ಆದೇಶ ಮಾಡಬಹುದು. ಯಾವನೇ ವ್ಯಕ್ತಿಯ ಮೇಲೆ ಅಥವಾ ಬಳಿ ಯಾವುದೇ ವಸ್ತು ದೊರೆತಾಗ ಮತ್ತು ಅದು ಜೂಜಾಟದ ಸಲಕರಣೆಯೆಂಬುದಾಗಿ ಶಂಕಿಸಲು ಪೊಲೀಸ್ ಅಧಿಕಾರಿಗೆ ಯುಕ್ತ ಆಧಾರಗಳಿದ್ದುವೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಅಂಥ ವಿದ್ಯಮಾನಗಳು, ತದ್ವಿರುದ್ಧ ರುಜುವಾತಾಗುವವರೆಗೆ ಅಂಥ ವಸ್ತು ಜೂಜಾಟದ ಸಲಕರಣೆಯಾಗಿದ್ದಿತೆಂಬುದಕ್ಕೆ ಮತ್ತು ಯಾವನ ಮೇಲೆ ಅಥವಾ ಬಳಿ ಆ ವಸ್ತು ದೊರಕಿತೋ ಅವನು ಜೂಜಾಟದ ಉದ್ದೇಶಕ್ಕಾಗಿ ಅಲ್ಲಿದ್ದನೆಂಬುದಕ್ಕೆ ಸಾಕ್ಷ್ಯ ರತಕ್ಕದ್ದು.

**XX XX XX**

**90. ಯಾವುದೇ ಸಮಾಚಾರ ಅಥವಾ ಮಾಹಿತಿಯನ್ನು ಮುದ್ರಿಸುವುದು, ಪ್ರಕಟಿಸುವುದು ಅಥವಾ ಹಂಚುವುದು.-** (1) ಯಾವ ವ್ಯಕ್ತಿಯೂ, ಯಾವುದೇ ವೃತ್ತ ಪತ್ರಿಕೆಯನ್ನು, ವೃತ್ತ ಪತ್ರವನ್ನು ಅಥವಾ ಇತರ ಲಿಖಿತವನ್ನು ಅಥವಾ ಯಾವುದೇ ಸಮಾಚಾರ ಅಥವಾ ಮಾಹಿತಿಯನ್ನು ಜೂಜಾಟಕ್ಕೆ ಸಹಾಯ ನೀಡುವ ಅಥವಾ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ, ಮುದ್ರಿಸತಕ್ಕದ್ದಲ್ಲ, ಪ್ರಕಟಿಸತಕ್ಕದ್ದಲ್ಲ, ಮಾರತಕ್ಕದ್ದಲ್ಲ, ಹಂಚತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಪರಿಚಾಲನೆ ಮಾಡತಕ್ಕದ್ದಲ್ಲ.

(2) ಯಾವುದೇ ವ್ಯಕ್ತಿಯು, (1)ನೆಯ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅವನು ಅಪರಾಧ ಸಿದ್ಧಪಟ್ಟ ಮೇಲೆ, ಆರು ತಿಂಗಳವರೆಗೆ ವಿತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಮೇರೆಗಿನ ಯಾವುದೇ ಅಪರಾಧ ಮಾಡುವ ಉದ್ದೇಶಕ್ಕಾಗಿ ಉಪಯೋಗಿಸಲಿರುವುದಾಗಿ ಯುಕ್ತವಾಗಿ ಶಂಕಿಸಲಾದ ಅಥವಾ ಉಪಯೋಗಿಸಲು ಉದ್ದೇಶಿಸಿರುವ ಎಲ್ಲ ವಸ್ತುಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಯಾರೇ ಪೊಲೀಸ್ ಅಧಿಕಾರಿಯು ಯಾವುದೇ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧನೆ ಮಾಡಬಹುದು ಮತ್ತು ಅಂತಹ ಎಲ್ಲ ವಸ್ತುಗಳನ್ನು ವಶಪಡಿಸಿಕೊಳ್ಳಬಹುದು.

(4) (1)ನೆಯ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯನ್ನು ಯಾವನೇ ಪೊಲೀಸ್ ಅಧಿಕಾರಿಯು, ವಾರಂಟಿಲ್ಲದೇ ದ ದಸ್ತಗಿರಿ ಮಾಡಬಹುದು.

**XX XX XX**

**108. 35, 38 ಅಥವಾ 39ನೆಯ ಪ್ರಕರಣಗಳ ಮೇರೆಗಿನ ನಿಯಮಗಳ ಅಥವಾ ನಿದೇ ಶನಗಳ ಉಲ್ಲಂಘನೆಗಾಗಿ ದಂಡ.-** ಯಾವೊಬ್ಬನು, 35, 38 ಅಥವಾ 39ನೆಯ ಪ್ರಕರಣದ ಮೇರೆಗೆ ಕಾನೂನುಬದ್ಧವಾಗಿ ಮಾಡಲಾದ ಯಾವುದೇ ಆದೇಶವನ್ನು ಪಾಲಿಸದಿದ್ದರೆ ಅದನ್ನು ಪಾಲಿಸದಿರಲು ದುಷ್ಪ್ರೇರಣೆ ಮಾಡಿದರೆ, ಅವನು ಅಪರಾಧ ಸಿದ್ಧಪಟ್ಟ ಮೇಲೆ

(i) ಪಾಲಿಸದ ಅಥವಾ ಪಾಲಿಸದಿರಲು ದುಷ್ಪ್ರೇರಣೆ ಮಾಡಲಾದ ಆದೇಶವು 35ನೆಯ ಪ್ರಕರಣದ (1)ನೆಯ ಉಪಪ್ರಕರಣದ ಮೇರೆಗೆ ಅಥವಾ 38ನೆಯ ಪ್ರಕರಣದ ಮೇರೆಗೆ ಅಥವಾ 39ನೆಯ ಪ್ರಕರಣದ ಮೇರೆಗೆ ಮಾಡಲಾಗಿರುವಲ್ಲಿ, ಒಂದು ವರುಷದ ಅವಧಿಯವರೆಗೆ ವಿತರಿಸಬಹುದಾದ, ಆದರೆ ಲಿಖಿತದಲ್ಲಿ ಕಾರಣಗಳನ್ನು ಅಭಿಲೇಖಿಸಿದ ಹೊರತು, ನಾಲ್ಕು ತಿಂಗಳುಗಳಿಗೆ ಕಡಿಮೆ ಇರದ ಕಾರವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಬದ್ಧನಾಗಿರತಕ್ಕದ್ದು;

(ii) ಸದರಿ ಆದೇಶವು 35ನೆಯ ಪ್ರಕರಣದ (2)ನೆಯ ಉಪಪ್ರಕರಣದ ಮೇರೆಗೆ ಮಾಡಲಾಗಿದ್ದರೆ, ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ; ಮತ್ತು

(iii) ಸದರಿ ಆದೇಶವು 35ನೆಯ ಪ್ರಕರಣದ (3)ನೆಯ ಉಪಪ್ರಕರಣದ ಮೇರೆಗೆ ಮಾಡಲಾಗಿರುವಲ್ಲಿ ಒಂದು ನೂರು ರೂಪಾಯಿಗಳವರೆಗೆ ವಿತರಿಸಬಹುದಾದ ಜುಲ್ಮಾನೆಯಿಂದ; - ಅವನು ದಂಡಿತನಾಗತಕ್ಕದ್ದು.

**XX XX XX**

**113. 54, 55, 56 ಅಥವಾ 63ನೆಯ ಪ್ರಕರಣದ ಮೇರೆಗಿನ ನಿರ್ದೇಶನಗಳ ಉಲ್ಲಂಘನೆಗಾಗಿ ದಂಡ.-** ಯಾವೊಬ್ಬನು 54, 55, 56 ಅಥವಾ 63ನೆಯ ಪ್ರಕರಣದ ಮೇರೆಗೆ ಹೊರಡಿಸಿದ ನಿರ್ದೇಶನವನ್ನು ವಿರೋಧಿಸಿದರೆ, ಅಥವಾ ಪಾಲಿಸದಿದ್ದರೆ ಅಥವಾ ಅದರಂತೆ ನಡೆಯಲು ತಪ್ಪಿದರೆ, ಅಥವಾ ಅಂತಹ ನಿದೇಶವನ್ನು ವಿರೋಧಿಸಲು ಅಥವಾ ಪಾಲಿಸದಿರಲು ದುಷ್ಪ್ರೇರಣೆ ಮಾಡಿದರೆ, ಅಪರಾಧ ಸಿದ್ಧಪಟ್ಟ ಮೇಲೆ, ಒಂದು ವರುಷದ ವರೆಗೆ ವಿಸ್ತರಿಸಬಹುದಾದ, ಆದರೆ ಲಿಖಿತದಲ್ಲಿ ಅಭಿಲೇಖನದ ಕಾರಣಗಳನ್ನು ಅಭಿಲೇಖಿಸಿದ ಹೊರತು ನಾಲ್ಕು ತಿಂಗಳಿಗೆ ಕಡಿಮೆಯಿಲ್ಲದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಬದ್ಧನಾಗಿರತಕ್ಕದ್ದು.

**XX XX XX**

**114. ಹೊರಗೆ ಹೋಗಲು ವ್ಯಕ್ತಿಗೆ ನಿರ್ದೇ ಸಲಾದ ಸ್ಥಳವನ್ನು ಅವನು ಪ್ರವೇಶಿಸಿದ್ದಕ್ಕಾಗಿ ದಂಡ .-** 61ನೆಯ ಪ್ರಕರಣದಲ್ಲಿ ಏನೇ ಇದ್ದರೂ, ಯಾವೊಬ್ಬ ವ್ಯಕ್ತಿಯು, 54, 55, 56 ಅಥವಾ 63ನೆಯ ಪ್ರಕರಣಗಳ ಮೇರೆಗೆ ಅವನಿಗೆ ಕೊಡಲಾದ ನಿರ್ದೇಶನಗಳನ್ನು ಉಲ್ಲಂಘಿಸಿ, ಅವನು ಹೊರಗೆ ಹೋಗಲು ನಿರ್ದೇಶಿಸಲಾದ ಸ್ಥಳವನ್ನು ಪ್ರವೇಶಿಸಿದರೆ, ಅಪರಾಧ ಸಿದ್ಧಪಟ್ಟ ಮೇಲೆ, ಎರಡು ವರುಷಗಳ ಅವಧಿಯವರೆಗೆ ವಿಸ್ತರಿಸಬಹುದಾದ, ಆದರೆ ಲಿಖಿತದಲ್ಲಿ ಕಾರಣಗಳನ್ನು

ಅಭಿಲೇಖಿಸಿದ ಹೊರತು, ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಹೊಣೆಯಾಗತಕ್ಕದ್ದು.

**XX XX XX**

**123. ದ್ರೋಹ ಇತ್ಯಾದಿಗಳನ್ನು ಉಂಟುಮಾಡುವುದಕ್ಕಾಗಿ ದಂಡ.-** (1) ಯಾವನೇ ವ್ಯಕ್ತಿಯು, ಭಾರತದಲ್ಲಿ ವಿಧಿಬದ್ಧವಾಗಿ ಸ್ಥಾಪಿತವಾದ ಸರಕಾರದ ಬಗ್ಗೆ ಪೊಲೀಸ್ ಬಲದವರಲ್ಲಿ ಉದ್ದೇಶಪೂರ್ವಕವಾಗಿ ದ್ರೋಹವನ್ನುಂಟುಮಾಡಿದರೆ ಅಥವಾ ಉಂಟುಮಾಡಲು ಯತ್ನಿಸಿದರೆ ಅಥವಾ ಹಾಗೆ ದ್ರೋಹ ಉಂಟುಮಾಡುವ ಸಂಭವವಿರುವುದೆಂದು ತಾನು ತಿಳಿದೂ ಯಾವುದೇ ಕೃತ್ಯವನ್ನು ಮಾಡಿದರೆ, ಅಥವಾ ಯಾವನೇ ಪೊಲೀಸ್ ಬಲದವನು ತನ್ನ ಸೇವೆಯಿಂದ ಪರಾನ್ಮುಖನಾಗುವಂತೆ ಹಿಂತೆಗೆದುಕೊಳ್ಳುವಂತೆ ಅಥವಾ ಶಿಸ್ತುಭಂಗ ಮಾಡುವಂತೆ ಅವನನ್ನು ಪ್ರೇರೇಪಿಸಿದರೆ ಅಥವಾ ಪ್ರೇರೇಪಿಸುವಂತೆ ಯತ್ನಿಸಿದರೆ, ಅಥವಾ ಹಾಗೆ ಪ್ರೇರೇಪಿಸುವ ಸಂಭವವಿರುವುದೆಂದು ತಾನು ತಿಳಿದೂ ಯಾವುದೇ ಕೃತ್ಯವನ್ನು ಮಾಡಿದರೆ, ಆರು ತಿಂಗಳ ಅವಧಿಯ ವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದು.

**ವಿವರಣೆ.-** ಸರಕಾರದ ಯಾವುದೇ ಕ್ರಮಗಳನ್ನು ವಿಧಿಬದ್ಧ ರೀತಿಯಲ್ಲಿ ಬದಲಾವಣೆ ಮಾಡಿಸುವ ಉದ್ದೇಶದಿಂದ ಆ ಬಗ್ಗೆ ಅಸಮ್ಮತಿಯನ್ನು ಅಥವಾ ಸರಕಾರದ ಆಡಳಿತಾತ್ಮಕ ಅಥವಾ ಇತರ ಕ್ರಮದ ಬಗ್ಗೆ ಅಸಮ್ಮತಿಯನ್ನು ವ್ಯಕ್ತಪಡಿಸುವಿಕೆಗಳು, ದ್ರೋಹವನ್ನುಂಟು ಮಾಡುವ ಅಥವಾ ಉಂಟು ಮಾಡುವ ಉದ್ದೇಶವಿರುವ ಅಥವಾ ಉಂಟುಮಾಡಬಹುದಾಗಿದ್ದ ಹೊರತು, ಈ ಪ್ರಕರಣದ ಮೇರೆಗೆ ಅಪರಾಧವಾಗುವುದಿಲ್ಲ.

(2) ಸದ್ಭಾವನೆಯಿಂದ,-

(ಎ) ಕಾನೂನಿನ ಅಧಿಕೃತವಾದ ಯಾವುದೇ ರೀತಿಯಲ್ಲಿ ತನ್ನ ಸೇವೆಯಿಂದ ಪರಾನ್ಮುಖನಾಗುವಂತೆ ಯಾವನೇ ಪೊಲೀಸ್ ಬಲದವನಿಗೆ ಪ್ರೇರೇಪಿಸುವುದರ ಮೂಲಕ ಅವನ ಕಲ್ಯಾಣವನ್ನು ಅಥವಾ ಹಿತವನ್ನು ಉನ್ನತಿಗೊಳಿಸುವ ಉದ್ದೇಶಕ್ಕಾಗಿ ಮಾಡಿದ; ಅಥವಾ

(ಬಿ) ಪೊಲೀಸ್ ಬಲದವರಿಗಾಗಿಯೇ ಅವರ ಹಿತಸಾದsನೆಯನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶದಿಂದ ರಚಿತವಾದ ಯಾವುದೇ ಸಂಘವು ಸರಕಾರದಿಂದ ಅಧಿಕೃತಗೊಳಿಸಲ್ಪಟ್ಟಿದ್ದು ಅಥವಾ ಮನ್ನಣೆ ಪಡೆದಿದ್ದು ಅಂಥ ಸಂಘದ ಮೂಲಕ ಅಥವಾ ಪರವಾಗಿ ಮಾಡಿದ ಮತ್ತು ಮಾಡಿದ ಕೆಲಸವು ಸರ್ಕಾರದ ಒಪ್ಪಿಗೆ ಪಡೆದ ಯಾವುದೇ ನಿಯಮಗಳ ಅಥವಾ ಸಂಘದ ನಿಯಮಾವಳಿಯ ಮೇರೆಗೆ ಮಾಡಿದರೆ, ಯಾವುದೇ ಈ ಪ್ರಕರಣದ ಮೇರೆಗಿನ ಅಪರಾಧವೆಂದು ಭಾವಿಸಲ್ಪಡತಕ್ಕದಲ್ಲ.

(3) ಯಾವ ನ್ಯಾಯಾಲಯವು, ಜಿಲ್ಲಾ ಮ್ಯಾಜಿಸ್ಟ್ರೇಟರನ ಪೂರ್ವಮಂಜೂರಿಯನ್ನು ಪಡೆದಿದ್ದ ಅಥವಾ ಅವನಿಂದ ದೂರು ಬಂದಿದ್ದ ಹೊರತು, ಪ್ರಕರಣದ ಮೇರೆಗಿನ ಯಾವ ಅಪರಾಧವನ್ನು ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ.

(4) ಮೊದಲನೆಯ ವರ್ಗದ ಮ್ಯಾಜಿಸ್ಟ್ರೇಟರಿನಿಗಿಂತ ಕಡಿಮೆ ದರ್ಜೆಯ ಯಾವ ನ್ಯಾಯಾಲಯವು ಈ ಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು ವಿಚಾರಿಸತಕ್ಕದ್ದಲ್ಲ.

(5) 1898ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆಯ 12ನೆಯ ಅಧ್ಯಾಯದಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗಿನ ಯಾವ ಅಪರಾಧವೂ ಸಂಕ್ಷಿಪ್ತ ಕ್ರಮದಿಂದ ವಿಚಾರಿಸಲ್ಪಡತಕ್ಕದ್ದಲ್ಲ.

**XX XX XX**

**128. ಇತರ ಅಧಿನಿಯಮಗಳ ಮೇರೆಗಿನ ಅಪರಾಧಗಳ ಸಂಬಂಧದ ಪ್ರಾಸಿಕ್ಯೂಷನ್ನು ಅಬಾಧಿತ.-** ಈ ಅಧಿನಿಯಮದಲ್ಲಿರುವುದು ಯಾವುದೂ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಇತರ ಯಾವುದೇ ಅಧಿನಿಯಮದ ಮೇರೆಗೆ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಯಾವನೇ ವ್ಯಕ್ತಿಯ ವಿರುದ್ಧ ಪ್ರಾಸಿಕ್ಯೂಷನ್ನು ನಡೆಸಲು ಮತ್ತು ಅವನನ್ನು ದಂಡಿಸಲು ಅಥವಾ ಇತರ ಯಾವುದೇ ಅಧಿನಿಯಮದ ಮೇರೆಗೆ ದಂಡನೀಯವಾಗಿರುವ ಯಾವುದೇ ಪ್ರಾಸಿಕ್ಯೂಷನ್ನು ನಡೆಸಲು ಮತ್ತು ದಂಡಿಸಲು ಪ್ರತಿಬಂಧಿಸುವುದೆಂದು ಅರ್ಥ ಮಾಡತಕ್ಕದ್ದಲ್ಲ.

ಪರಂತು, ಅಂಥ ಎಲ್ಲ ಮೊಕದ್ದಮೆಗಳು 1898ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆಯ 403ನೆಯ ಪ್ರಕರಣದ ಉಪಬಂಧಗಳಿಗೊಳಪಟ್ಟಿರತಕ್ಕದ್ದು.

**XX XX XX**

**176. ಚಾತುರ್ಯದ ಆಟಗಳ ಉಳಿಸುವಿಕೆ.-** ಸಂದೇಹ ನಿವಾರಣೆಗಾಗಿ, ಕೇವಲ ಚಾತುರ್ಯದ ಆಟವಾಡುವುದಕ್ಕೆ ಮತ್ತು ಅಂಥ ಚಾತುರ್ಯದ ಆಟದಲ್ಲಿ ಭಾಗವಹಿಸುವ ವ್ಯಕ್ತಿಗಳು ಪಣ ಕಟ್ಟುವುದಕ್ಕೆ 79 ಮತ್ತು 80ನೆಯ ಪ್ರಕರಣದ ಉಪಬಂಧಗಳು ಅನ್ವಯಿಸುವುದಿಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

**XX XX XX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE